# ಪ್ರಶಸ್ತಿಗಾಗಿ ಸಿನಿಮಾ ಮಾಡುತ್ತಿಲ್ಲ



**ನಟ. ನಿರ್ಮಾಪಕ, ವಿತರಕ, ಉದ್ಯಮಿ– ಹೀಗೆ ಹಲವು ಮುಖಗಳನ್ನು ಹೊಂದಿರುವ ಬಸಂತ ಕುಮಾರ್ ಪಾಟೀಲ್ ಅವರ ಸಿನಿಮಾ ಸಾಧನೆಗೆ 2016ರ ಡಾ.ರಾಜ್‌ಕುಮಾರ್ ಪ್ರಶಸ್ತಿ ಸಂದಿದೆ. ಈ ಹಿನ್ನೆಲೆಯಲ್ಲಿ ಅವರೊಂದಿಗೆ ನಡೆಸಿದ ಮಾತುಕತೆ ಇಲ್ಲಿದೆ..**

**★ ಬಿಂದು**

ಗಾಂಧಿನಗರದಲ್ಲಿ 'ಅವಾರ್ಡ್ ನಿರ್ಮಾಪಕ' ಎಂದೇ ಖ್ಯಾತಿ ಪಡೆದಿರುವ ಬಸಂತ ಕುಮಾರ್ ಪಾಟೀಲ್, ಕಳೆದ ಡಿಸೆಂಬರ್‌ನಲ್ಲಿ ಮತ್ತೆ ಎರಡು ಸಿನಿಮಾಗಳನ್ನು ನಿರ್ಮಿಸಿದ್ದಾರೆ. ಪಿ.ಶೇಷಾದ್ರಿ ಮತ್ತು ಪಂಚಾಕ್ಷರಿ ಅವರು ನಿರ್ದೇಶಿಸಿರುವ ಎರಡೂ ಹೊಸ ಸಿನಿಮಾಗಳು ಡಿಸೆಂಬರ್‌ನಲ್ಲೇ ಸೆನ್ಸಾರ್ ಆಗಿವೆ. ಎರಡಕ್ಕೂ ಕಥೆ ಬೊಳುವಾರು ಮುಹಮದ್ ಕುಂಞ ಅವರದ್ದು. ಅಲ್ಲಿಂದಲೇ ಮಾತುಕತೆ ಶುರುವಾಯಿತು.

★ *ಇದೇನಿದು ವರ್ಷದ ಕೊನೆಯ ಗಡಿಬಿಡಿ? ಒಮ್ಮೆಗೇ ಎರಡು ಸಿನಿಮಾಗಳನ್ನು ನಿರ್ಮಿಸಿದ್ದೀರಿ?*

ಬಸಂತ್: ಮೊದಲನೆಯದಾಗಿ ನನ್ನ ಸಾಧನೆಯನ್ನು ಗುರುತಿಸಿ ಡಾ.ರಾಜ್‌ಕುಮಾರ್ ಪ್ರಶಸ್ತಿಯನ್ನು ನೀಡಿದ ಕನ್ನಡ ಚಿತ್ರರಂಗ ಮತ್ತು ಕರ್ನಾಟಕ ಸರಕಾರವನ್ನು ಅಭಿನಂದಿಸುತ್ತೇನೆ. ನನ್ನ ಮಟ್ಟಿಗೆ ಇದು ಬಹುದೊಡ್ಡ ಗೌರವ. ಹಿಂದೆ ವಿಷ್ಣುವರ್ಧನ್ ಮುಂತಾದ ಮಹಾನ್ ವ್ಯಕ್ತಿಗಳಿಗೆ ಸಂದ ಗೌರವವದು. 2015ರಲ್ಲಿ ಬಸಂತ್ ಪ್ರೊಡಕ್ಷನ್‌ನ ಯಾವುದೇ ಸಿನಿಮಾ ಬರಲಿಲ್ಲವೆ ಎನ್ನುವ ಬೇಸರ ನವೆಂಬರ್‌ವರೆಗೂ ಇತ್ತು. ಪಿ.ಶೇಷಾದ್ರಿ ಅವರಿಗೆ ಹೊಸ ಸಿನಿಮಾ ಮಾಡಿ ಎಂದು ಕೇಳಿಕೊಂಡಿದ್ದೆ. ಆದರೆ ಅವರು ಕಥೆ ಸರಿಯಾದ್ದು ಸಿಕ್ಕಿಲ್ಲ ಎಂದೇ ಹೇಳುತ್ತಿದ್ದರು. ಈ ಮಧ್ಯೆ ಪಂಚಾಕ್ಷರಿ ಅವರು ಬೊಳುವಾರು ಅವರ 'ಒಂದು ತುಂಡು ಗೋಡೆ' ಕಥೆಯನ್ನು ಇಟ್ಟುಕೊಂಡು ಸಿನಿಮಾ ನಿರ್ದೇಶಿಸುತ್ತೇನೆ ಎಂದು ಬಂದರು. ಅದನ್ನು ನಿರ್ಮಿಸಲು ಒಪ್ಪಿಕೊಂಡೆ. ಅದಾಗಿ ಮರುದಿನವೇ ಶೇಷಾದ್ರಿ ಅವರು ಫೋನ್ ಮಾಡಿ 'ನನ್ನ ಚಿತ್ರಕಥೆ ರೆಡಿಯಾಗಿದೆ' ಎಂದರು! 'ನೋ' ಎನ್ನುವ ಹಾಗಿಲ್ಲ! ಸರಿ, ಅದನ್ನೂ ಒಪ್ಪಿಕೊಂಡೆ. ನೋಡಿದರೆ ಶೇಷಾದ್ರಿ ಅವರದ್ದೂ ಬೊಳುವಾರು ಬರೆದಿರುವ 'ದೃಷ್ಟಿ' ಎನ್ನುವ ಕಥೆ. ಸಿನಿಮಾದ ಹೆಸರನ್ನು 'ಭೇಟಿ' ಎಂದು ಇಟ್ಟಿದ್ದಾರೆ. 'ಒಂದು ತುಂಡು ಗೋಡೆ' ಕಥೆಯನ್ನು 'ಪಾತುಮ್ಮ' ಎಂದು ಸಿನಿಮಾ ಮಾಡಿದ್ದಾರೆ.

★ *ಪ್ರಶಸ್ತಿಗಾಗಿಯೇ ಸಿನಿಮಾ ಮಾಡುವವರು ಎನ್ನುವಷ್ಟು ನಿಮ್ಮ ಖ್ಯಾತಿ ಹಬ್ಬಿದೆ. ಅಷ್ಟೊಂದು ಪ್ರಶಸ್ತಿಗಳು ನಿಮ್ಮ ಸಿನಿಮಾಗಳಿಗೆ ಸಿಕ್ಕಿವೆ..*

ಇಲ್ಲ, ನಾನು ಪ್ರಶಸ್ತಿಗಳಿಗಾಗಿ ಸಿನಿಮಾ ಮಾಡುತ್ತಿಲ್ಲ. ಆದರೆ ನೀವು ಹೇಳಿದ ಹಾಗೆ, ಕನ್ನಡದಲ್ಲಿ ಅತ್ಯಧಿಕ ಪ್ರಶಸ್ತಿಗಳನ್ನು ಗಳಿಸಿದ ನಿರ್ಮಾಪಕ ನಾನು. ಆ ಮಟ್ಟಿಗೆ ನಾನು ಅದೃಷ್ಟವಂತ. ಗಿರೀಶ್ ಕಾಸರವಳ್ಳಿ, ಪಿ.ಶೇಷಾದ್ರಿ, ರಾಮದಾಸ ನಾಯ್ಡು ಮುಂತಾದ ಖ್ಯಾತನಾಮರು ನನಗೆ ಸಿನಿಮಾ ಮಾಡಿಕೊಟ್ಟಿದ್ದಾರೆ. ಗಿರೀಶ್ ಅವರ 'ನಾಯಿ ನೆರಳು', 'ಗುಲಾಬಿ ಟಾಕೀಸ್', 'ಕನಸೆಂಬೋ ಕುದುರೆಯನೇರಿ' ಮತ್ತು 'ಕೂರ್ಮಾವತಾರ' ಹೀಗೆ ಒಟ್ಟು ನಾಲ್ಕು ಸಿನಿಮಾಗಳು. ಶೇಷಾದ್ರಿಯವರ 'ಬೆಟ್ಟದ ಜೀವ', 'ಭಾರತ್ ಸ್ಟೋರ್ಸ್', ಡಿಸೆಂಬರ್ 1 ಮತ್ತು 'ವಿದಾಯ' ಎಂಬ ನಾಲ್ಕು ಸಿನಿಮಾಗಳು. ನಾಯ್ಡು ಅವರದ್ದು 'ಹೆಜ್ಜೆಗಳು' ಸಹಿತ ಮೂರು ಸಿನಿಮಾಗಳು. ಒಟ್ಟು ಹದಿನೈದು ಸಿನಿಮಾಗಳು. ಪನೋರಮಾದಲ್ಲಿ ನಾನು ನಿರ್ಮಿಸಿದ ಒಟ್ಟು ಎಂಟು ಸಿನಿಮಾಗಳು ಪ್ರದರ್ಶನ ಕಂಡಿವೆ. ಇದುವರೆಗೆ ಯಾವ ನಿರ್ಮಾಪಕರದ್ದೂ ಇಷ್ಟೊಂದು ಸಿನಿಮಾಗಳು ಪನೋರಮಾದಲ್ಲಿ ಪ್ರದರ್ಶನ ಕಂಡಿಲ್ಲ. ನನ್ನ ಐದು ಸಿನಿಮಾಗಳಿಗೆ ರಾಷ್ಟ್ರೀಯ ಪ್ರಶಸ್ತಿಗಳು ಬಂದಿವೆ. ಬೆಟ್ಟದ ಜೀವ ಮತ್ತು ಹೆಜ್ಜೆಗಳು ಒಂದೇ ವರ್ಷ ಪ್ರಶಸ್ತಿ ಪಡೆದವು. 14 ರಾಜ್ಯ ಪ್ರಶಸ್ತಿಗಳು, ಒಟ್ಟು